ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಯ ಅವಧಿ

284-ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಆಡಳಿತ ಅವಧಿಯು ಅಂತ್ಯಗೊಂಡಿದೆಯೆ?

ಆ) ಹಾಗಿದ್ದರೆ ಇವುಗಳಿಗೆ ಚುನಾವಣೆ ನಡೆಯುತ್ತಿದೆಯೇ?

ಇ) ಹಾಗಿಲ್ಲದಿದ್ದರೆ ಈ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆಯೇ?

ಈ) ಈ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ?

ಉ) ಹಾಗಿದ್ದರೆ ಈ ಸಂಸ್ಥೆಗಳಿಗೆ ಯಾವಾಗ ಚುನಾವಣೆ ನಡೆಯುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಎಲ್ಲಾ ಜಿಲ್ಲಾ ಪರಿಷತ್ತುಗಳ ಅವಧಿಯು ದಿನಾಂಕ : 13-1-1992ಕ್ಕೆ ಅಂತ್ಯಗೊಂಡಿದೆ. ಮಂಡಲ ಪಂಚಾಯಿತಿಗಳ ಅವಧಿಯು ಕೊನೆಗೊಳ್ಳುವ ದಿನಾಂಕವನ್ನು ಅನುಬಂಧ 1ರಲ್ಲಿ ತೋರಿಸಲಾಗಿದೆ. ಬೀದರ್ ಜಿಲ್ಲಾ ಪರಿಷತ್ತಿಗೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯಿದೆ. ಇದೇ ರೀತಿ ರಾಜ್ಯದ ಕೆಲವು ಮಂಡಲ ಪಂಚಾಯಿತಿಗಳಿಗೂ ತಡೆಯಾಜ್ಞೆಯಿದೆ.

ಆ) ಇಲ್ಲ.

ಇ) ಹೌದು. ಚುನಾಯಿತ ಸದಸ್ಯರ ಅವಧಿ ಮುಗಿದ ಕೂಡಲೇ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ.

ಈ) ಇಲ್ಲ.

ಉ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಹೊಸ ವಿಧೇಯಕವು ಜಾರಿಗೆ ಬಂದ ಕೂಡಲೇ ಕ್ಷೇತ್ರ ಪುನರ್ ವಿಂಗಡಣೆ ಕಾರ್ಯಯವನ್ನು ಕೈಗೊಂಡು ಪ್ರತಿಯೊಂದು ಕ್ಷೇತ್ರದ ಮತದಾರರ ಪಟ್ಟಿ ಪೂರ್ಣಗೊಂಡ ನಂತರ ಚುನಾವಣೆ ದಿನಾಂಕವನ್ನು ಪ್ರಕಟಿಸಲಾಗುವುದು.

ANNEXURE-1

LIST SHOWING THE TENURE OF ELECTED MEMBERS OF MANDAL PANCHAYATS IN THE STATE

Sl. No.	*Name of the District*	*Date of list published by Deputy Commissioner conncerned*	*Date of expiry*
1.	Bangalore	9.2.1987	8.2.1992
2.	Kolar	7.2.1987	6.2.1992
3.	Tumkur	6.2.1987	5.2.1992
4.	Chitradurga	9.2.1987	8.2.1992

5.	Shimoga	13.2.1987	12.2.1992
6.	Mysore	12.2.1987	11.2.1992
7.	Mandya	23.2.1987	22.2.1992
8.	Coorg	7.2.1987	06.2.1992
9.	Dakshina Kannada	9.2.1987	08.2.1992
10.	Chickmagalur	9.2.1987	08.2.1992
11.	Hassan	16.2.1987	15.2.1992
12	Belgaum	3.2.1987	22.2.1992
13.	Dharwad	4.4.1987	03.4.1992
14.	Bijapur	31.3.1987	30.3.1992
15.	Karwar	30.3.1987	29.3.1992
16	Gulbarga	4.4.1987	03.4.1992
17.	Bidar	7.2.1987	06.2.1992
18.	Raichur	27.1.1987	26.1.1992
19.	Bellary	11.2.1987	10.2.1992

NOTE: The dates of Notification constituting the Mandal Panchyats should however be verified once again.

ಪ್ರವಾಸೋದ್ಯಮದ ಅಭಿವೃದ್ಧಿ

298-ಶ್ರೀ ಸಾದತ್ ಅಲಿ ಖಾನ್(ಚನ್ನಪಟ್ಟಣ): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಬಗ್ಗೆ ಪ್ರವಾಸೋದ್ಯಮ ಇಲಾಖೆ ಖರ್ಚು ಮಾಡಿರುವ ಹಣ ಎಷ್ಟು? (ವರ್ಷವಾರು ಮಾಹಿತಿ ಒದಗಿಸುವುದು)

ಆ) ಪ್ರವಾಸಿಗರಿಗಾಗಿ ಸೌಲಭ್ಯಗಳನ್ನು ಒದಗಿಸಿದ ಹೊಸ ಸ್ಥಳಗಳ ಹೆಸರುಗಳು.

ಇ) ಪ್ರವಾಸೋದ್ಯಮ ಇಲಾಖೆ ನಿರ್ವಹಿಸುತ್ತಿರುವ ಹೋಟೆಲುಗಳ ಒಟ್ಟು ಸಂಖ್ಯೆ ಹಾಗೂ ಇವುಗಳಿಂದ ಬಂದ ಆದಾಯ ಅಥವಾ ಇವುಗಳಿಂದ ಆದ ನಷ್ಟ ಎಷ್ಟು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) 1988-89 ರೂ. 1,78,65,382-00
1989-90 ರೂ. 1,32,00,447-00
1990-91 ರೂ. 2,15,09,000-00

ಆ) 1) ಪ್ರವಾಸಿ ಗೃಹ ಮತ್ತು ಶೀಘ್ರ ಆಹಾರ ವಿತರಣಾ ಕೇಂದ್ರ, ಸೋಗಲ (ಬೆಳಗಾಂ ಜಿಲ್ಲೆ).

2) ಪ್ರವಾಸಿಗೃಹ, ಸೌಂದತ್ತಿ (ಬೆಳಗಾಂ ಜಿಲ್ಲೆ).

3) ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಗೆ ಹೊನಲು ಬೆಳಕಿನ ಸೌಲಭ್ಯ(ಬೆಳಗಾಂ ಜಿಲ್ಲೆ).